# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಮುಖ್ಯ ಅಭಿಯಂತರರು (ಯೋಜನೆ-ಕೇಂದ್ರ) ರವರ ಕಛೇರಿ, ಎನ್.ಆರ್.ವೃತ್ತ ಬಿ.ಬಿ.ಎಂ.ಪಿ. ಬೆಂಗಳೂರು-02**

ಸಂ: ಮು.ಅ(ಯೋ-ಕೇ)/ತಾ.ಮ/06/2016-17 ದಿನಾಂಕ: 20-01-2017

## ತಾಂತ್ರಿಕ ಮಂಜೂರಾತಿ

ವಿಷಯ: "Comprehensive Development of church street Bangalore city as per TenderSure Guidelines" ಕಾಮಗಾರಿಯ ಅಂದಾಜುಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 ಬೆಂಗಳೂರು, ದಿ: 21-06-2016.
2. ಸರ್ಕಾರದ ಆದೇಶ ಸಂಖ್ಯೆ: ನಅಇ 836 ಎಂಎನ್‌ವೈ 2016, ಬೆಂಗಳೂರು ದಿ: 04-01-2017.
3. ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-5)ರ ಕಛೇರಿಯ ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ: CE(P)/AS/02/15-16. ದಿ:10-03-2016

*************

**ಪ್ರಸ್ತಾವನೆ:-**

ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-5) ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಉಲ್ಲೇಖ (1) ರ ಸರ್ಕಾರದ ಅದೇಶದಲ್ಲಿ ಅನುಬಂಧ-2 ರ ಕ್ರಮ ಸಂಖ್ಯೆ: 10 ರಲ್ಲಿ ಮೇಲೆ ಓದಲಾದ ಕಾಮಗಾರಿಗೆ ರೂ. 8.00 (ರೂಪಾಯಿ ಎಂಟು ಕೋಟಿಗಳು ಮಾತ್ರ) ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದ್ದು, ಸದರಿ ಕಾಮಗಾರಿಯನ್ನು ಉಲ್ಲೇಖ (2) ರಲ್ಲಿ ಆಡಳಿತಾತ್ಮ ಹಾಗೂ ಟೆಂಡರ್ ಅನುಮೋದನೆಯನ್ನು ಘನ ಸರ್ಕಾರದಿಂದ ನೀಡಲಾಗಿರುತ್ತದೆ. ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-5) ರವರು ಈ ಕಾಮಗಾರಿಗೆ 2015-16ನೇ ಸಾಲಿನ ಲೋಕೋಪಯೋಗಿ ಇಲಾಖೆಯ ಬೆಂಗಳೂರು ವೃತ್ತದ ದರಗಳನ್ನು ಅಳವಡಿಸಿ ಅಂದಾಜು ಪಟ್ಟಿಯನ್ನು ತಾಂತ್ರಿಕ ಮಂಜೂರಾತಿಗೆ ಸಲ್ಲಿಸಿರುತ್ತಾರೆ.

ಈ ಮೇಲ್ಕಂಡ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶವನ್ನು ನೀಡಲಾಗಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, "Comprehensive Development of church street Bangalore city as per TenderSure Guidelines" ಕಾಮಗಾರಿಯ ರೂ. 8.00 (ರೂಪಾಯಿ ಎಂಟು ಕೋಟಿಗಳು ಮಾತ್ರ) ಕೋಟಿಗಳ ಮೊತ್ತದ 2015-16ನೇ ಸಾಲಿನ ದರಗಳ ಮೇಲೆ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

ಈ ತಾಂತ್ರಿಕ ಮಂಜೂರಾತಿಯನ್ನು ಈ ಕಛೇರಿಯ ತಾಂತ್ರಿಕ ದಾಖಲಾತಿ ವಹಿಯ ಸಂಖ್ಯೆ: CE(P)/TS/06/15-16. ದಿನಾಂಕ:20-01-2017 ರಲ್ಲಿ ನೊಂದಾಯಿಸಲಾಗಿದೆ.

**ತಾಂತ್ರಿಕ ನಿಬಂಧನೆಗಳು:**

1. ಅಂದಾಜಿನಲ್ಲಿ ಅಳವಡಿಸಿರುವ ಇಡಿಗಂಟು (Lumpsum) ರೂಪದಲ್ಲಿ ಒದಗಿಸಲಾದ ಮೊತ್ತಗಳಿಗೆ ವಿವರವಾದ ಅಂದಾಜುಗಳನ್ನು ಸಿದ್ಧಪಡಿಸಿ ಕೆಲಸ ಆರಂಭಿಸುವ ಮುನ್ನ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.
2. ಸರ್ಕಾರದ ಅದೇಶ ಉಲ್ಲೇಖ (1) ಮತ್ತು (2) ರಲ್ಲಿ ನಿರ್ಬಂಧಿಸಿರುವ ಷರತ್ತುಗಳನ್ನು ತಪ್ಪದೇ ನಿರ್ವಹಿಸತಕ್ಕದ್ದು,
3. ಕೆಲಸ ಪ್ರಾರಂಭಿಸುವ ಮುನ್ನ ಕಾಮಗಾರಿ ನಡೆಯುವ ಸ್ಥಳವು ವಿವಾದಗಳಿಂದ ಮುಕ್ತವಾಗಿದೆಯೆಂದು ಪರಿಶೀಲಿಸತಕ್ಕದ್ದು.
4. ಕಾಮಗಾರಿಗೆ ಮಂಜೂರಾದ ಮೊತ್ತದ ಹಣವನ್ನು ಅದೇ ಕಾಮಗಾರಿಗೆ ಉಪಯೋಗಿಸತಕ್ಕದ್ದು.
5. ಕಾಮಗಾರಿಯನ್ನು ಮೌಲ್ಯ ಪ್ರಮಾಣ ವಿವರಣೆಯ (Standard Specification) ಪ್ರಕಾರ ನಿರ್ವಹಿಸತಕ್ಕದ್ದು.

ಮುಖ್ಯ ಅಭಿಯಂತರರು (ಯೋಜನೆ-ಕೇಂದ್ರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ